'ಇನ್ನೊಂದು ಹತ್ತೊಂಬತ್ತು ತಿಂಗಳು ಕಳೆದರೆ ನಾನು ಫ್ರೀ. ನಿವೃತ್ತಿಯ ನಂತರ ಮಾಡುವುದಕ್ಕೆ ಬೇಕಾದಷ್ಟು ಯೋಜನೆಗಳಿವೆ' ಅಂದಿದ್ದರು. ಇತ್ತೀಚಿನ ಭೇಟಿಯಲ್ಲಿ ಪ್ರಧಾನಿಯವರ 'ಮನ್ ಕಿ ಬಾತ್' ಭಾಷಣಗಳ ಇಂಗ್ಲಿಷ್ ಅನುವಾದಿತ ಆವೃತ್ತಿ ಅವರ ಟೇಬಲ್ ಪಕ್ಕದಲ್ಲಿ ಕಾಣುವಂತೆ ಇತ್ತು. ಆಕಾಶವಾಣಿಯ ಅನಿವಾರ್ಯ ಸರ್ಕಾರಿ ನಿಷ್ಠೆಯ ಬಗ್ಗೆ ಮಾತು ಹೊರಳಿತು. ಈಗಿನ ಪ್ರಧಾನಿ ಆಕಾಶವಾಣಿಗೆ ಒಂದು ಬ್ರ್ಯಾಂಡ್ ಮೌಲ್ಯ ತಂದುಕೊಟ್ಟದ್ದರ ಬಗ್ಗೆ, ಅದನ್ನ ಆವರಿಸಿಕೊಂಡ ಬಗೆ, ಅಷ್ಟರಲ್ಲೂ ಉಳಿಸಿಕೊಳ್ಳಬೇಕಾದ, ಉಳಿಯಬಹುದಾದ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತಾಡಿದೆವು.

'ಪುನರ್ಭವ' ಅವರ ಗದ್ಯ ಬರಹಗಳ ಸಂಕಲನ (2009) ತಮ್ಮ ಸಹಲೇಖಕರ ಸಾಹಿತ್ಯ ಕುರಿತು ಆಗಾಗ್ಗೆ ಬರೆದ ಬರಹಗಳ ಸಂಕಲನ. ಆದರೆ ರವೀಂದ್ರರ ಗದ್ಯದ ಪ್ರತಿಭೆ ಪ್ರಕಟಗೊಂಡಿರುವುದು ಅವರ 'ತಾರಸೀ ಮಲ್ಹಾರ್' ಪ್ರಬಂಧಗಳ ಸಂಕಲನದಲ್ಲಿ. ಸಲೀಸಾಗಿ ಬಿಡಿ ಬಿಡಿ ವಿವರಗಳೊಂದಿಗೆ, ಲವಲವಿಕೆ, ತುಂಟತನಗಳ ಮತ್ತೊಂದು ಮುಖದ ಪರಿಚಯ ಅವರ ಗದ್ಯದಲ್ಲಾಗುತ್ತದೆ. 'ರವೀಂದ್ರಕುಮಾರರು ಕಾವ್ಯ ಕನ್ನಿಕೆಯನ್ನು ಸ್ವಲ್ಪ ಕಾಲ ಬದಿಗೆ ತಳ್ಳಿ, ಗದ್ಯವೆಂಬ ಹುಚ್ಚು ಜೋಗಿಯ ಹಿಂದೆ ಅಲೆಯುವ ಅಲೆಮಾರಿತನಕ್ಕೆ ಮರುಳಾದರೆ, ಒಳ್ಳೆಯ ಕಥನಗಾರನೊಬ್ಬ ಕನ್ನಡಕ್ಕೆ ಎಂಟ್ರಿ ಕೊಡಬಹುದು ಎಂದು ನನಗಂತೂ ಅನಿಸಿದೆ' ಎನ್ನುವ ಕತೆಗಾರ ಅಬ್ದುಲ್ ರಶೀದರ ಆಶಯ ನನ್ನದೂ ಆಗಿತ್ತು. ಜೀವನ ಪ್ರೀತಿಯ ಹಿನ್ನೆಲೆಯಲ್ಲಿ ಮೂಡಿಬಂದ ಅವರ ಪ್ರಬಂಧಗಳಲ್ಲಿ ಅವರ ಸಂಕಷ್ಟಗಳ ಸೂಕ್ಷ್ಮ ವಿವರಗಳೂ ಹೆಣೆದುಕೊಂಡಿದೆ. ಅವರ 'ಟೀಂ ಗುಂಜಿಗನೂರು' ಪ್ರಬಂಧವಂತೂ ಒಂದು ತಲೆಮಾರಿನ ಕ್ರಿಕೆಟ್ ಜ್ವರದ 'ಆಲ್ ಟೈಂ ಹಿಟ್' ಪ್ರಬಂಧ. ಇಲ್ಲಿರುವ ಎಲ್ಲ ಬರಹಗಳೂ ಇದು ನಮ್ಮದೂ ಅನುಭವವಲ್ಲವೆ? ಅಂತನ್ನಿಸುವ ಹಾಗೆ ಮಾಡುತ್ತವೆ. ಈ ಮಾತುಗಳನ್ನು ಹೇಳಿದಾಗ ಸಹಜವಾಗೇ ಒಬ್ಬ ಲೇಖಕನಿಗಾಗುವ ಸಾರ್ಥಕ ಖುಷಿ ಅವರ ಮುಖದಲ್ಲಿ ಹೊಳೆಯುತ್ತಿತ್ತು.

ತಮ್ಮ ವೃತ್ತಿ ಜೀವನದಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ, ನಗರಗಳಲ್ಲಿ ರವೀಂದ್ರ ನೆಲೆಸಿದ್ದು, ಕಾರ್ಯ ನಿರ್ವಹಿಸಿದ್ದರು. ಸಹಜವಾಗೇ ಅವರ ಮಾಧ್ಯಮ, ಅವರ ವ್ಯಕ್ತಿತ್ವ ತನ್ನ ಸುತ್ತಲೂ ಲೇಖಕರ – ಗೆಳೆಯರ ಒಂದು ದೊಡ್ಡ ವರ್ತುಲ ನಿರ್ಮಿಸಿತು. ಜೊತೆಗೆ ಎಲ್ಲ ಊರುಗಳಲ್ಲೂ ಅವರ ಕಾವ್ಯಾಭಿಮಾನಿಗಳು ಇದ್ದಂತೆ ಅವರ ಧ್ವನ್ಯಾಭಿಮಾನಿಗಳು 'ಕೇಳುಗ' ದೊರೆಗಳೂ ಇದ್ದರು. ತಮ್ಮ ಎಲ್ಲ ಕೆಲಸಗಳ ಬಗೆಗೂ ಒಂದು ಶಿಸ್ತುಬದ್ಧತೆ ಹಾಗೂ ಪ್ರೀತಿ ಇಟ್ಟುಕೊಂಡಿದ್ದ ರವೀಂದ್ರ ಯಾವ ಗುಂಪಿನ ಗುಂಪುಗುಳಿತನಕ್ಕೂ ಬಲಿ ಬೀಳಲಿಲ್ಲ. ಯಾರನ್ನೂ ಹಿಂಬಾಲಿಸಲು ಮುಂದಾಗಲಿಲ್ಲ. ದೇಹಿ ಅನ್ನಲಿಲ್ಲ; ತಮ್ಮ ಎತ್ತರದ ನಿಲುವನ್ನು ತಮ್ಮ ವ್ಯಕ್ತಿತ್ವದ ಎಲ್ಲ ಆಯಾಮಗಳಲ್ಲೂ ಇಟ್ಟುಕೊಂಡಿದ್ದರು. ಅವರ ನಿಲುವಿನಲ್ಲಿದ್ದ ಗಾಂಭೀರ್ಯ ನಡವಳಿಕೆಯಲ್ಲೂ ಇತ್ತು.


### ಡಿ.ವಿ. ಪ್ರಹ್ಲಾದ್

'ಸಂಚಯ' ಸಾಹಿತ್ಯ ಪತ್ರಿಕೆಯನ್ನು ಮೂರು ದಶಕಗಳ ಕಾಲ ಸಂಪಾದಿಸಿ ಪ್ರಕಟಿಸಿದ್ದಾರೆ. 'ಡ್ರೀಮರ್', 'ನಾಳೆಯಿಂದ', 'ಅನುದಿನವಿದ್ದು', 'ಹೊಳೆದದ್ದು ತಾರೆ...' ಅವರ ಕೆಲವು ಪ್ರಕಟಿತ ಪುಸ್ತಕಗಳಾಗಿವೆ. ಕವಿ, ವಿಮರ್ಶಕ ಪ್ರಹ್ಲಾದ್ ಕೆಲವು ಪುಸ್ತಕಗಳನ್ನು ಸಂಪಾದಿಸಿದ್ದಾರೆ. 40ಕ್ಕೂ ಹೆಚ್ಚು ಪುಸ್ತಕಗಳು ಅವರ 'ಸಂಚಯ' ಪ್ರಕಾಶನದಿಂದ ಪ್ರಕಟವಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.